# ಪ್ರಥಮ ಪಿಯುಸಿ ಐಚ್ಛಿಕ ಕನ್ನಡ
# ಕಡಿತಗೊಂಡ ಪಠ್ಯಕ್ರಮಕ್ಕೆ 2020–21
# ಮಾದರಿ ಪ್ರಶ್ನೆ ಪತ್ರಿಕೆ–1
**ವಿಷಯ: ಐಚ್ಛಿಕ ಕನ್ನಡ**

**ವಿಷಯದ ಸಂಕೇತ ಸಂಖ್ಯೆ : 16** — **ಒಟ್ಟು ಪ್ರಶ್ನೆಗಳ ಸಂಖ್ಯೆ 61**

**ಅವಧಿ : 3ಗಂಟೆ 15 ನಿಮಿಷ** — **ಅಂಕಗಳು : 100**

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು**

1. ಪರೀಕ್ಷಾರ್ಥಿಯು ಸಾಧ್ಯವಾದಷ್ಟು ತಮ್ಮ ಸ್ವಂತ ಪದಗಳಲ್ಲಿ ಉತ್ತರಿಸಿ
2. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪೂರ್ಣಾಂಕಗಳನ್ನು ಸೂಚಿಸುತ್ತವೆ.
3. ಪರೀಕ್ಷಾರ್ಥಿಗಳು ಉತ್ತರಿಸುವಲ್ಲಿ ಸಾಧ್ಯವಾದಷ್ಟು ಉತ್ತರವು ಶಬ್ಧಗಳ ಪರಿಮಿತಿಯೊಳಗೆ ಇರುವಂತೆ ಗಮನಿಸುವುದು.
4. ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥ ಮಾಡಿಕೊಳ್ಳಲು 15 ನಿಮಿಷ ಕಾಲಾವಕಾಶ ನೀಡಲಾಗಿದೆ.

**"ಅ–ವಿಭಾಗ"**

**1) ಎಲ್ಲಾ ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ. 1*10=10**

1. ಕ್ಷತ್ರಿಯರ ಗುಣ ಯಾವುದು ?
2. ಮಂದ ಮತಿಯ ಜನಗಳು ಏನು ಮಾಡುತ್ತಾರೆ ?
3. ಯಾವುದು ಸ್ಥಿರವಲ್ಲವೆಂದು ಗರತಿ ಹೇಳುತ್ತಾಳೆ ?
4. ರೊಚ್ಚಿನವರು ಯಾರು ?
5. ಶ್ರಾವಣ ಯಾವ ಉಡುಪನ್ನುಟ್ಟು ಬಂದಿತು?
6. ಕನಸುಗಳು ಎಲ್ಲಿ ಬಂದಿಯಾಗಿವೆ ?
7. ಭಯಗೊಂಡ ಬ್ರಾಹ್ಮಣನು ಕಡೆಗೆ ಏನು ಮಾಡಿದನು ?
8. ಯಾರ ಮೈಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ ?
9. ಪುಣೆಯಲ್ಲಿನ ಪ್ರಸಿದ್ಧ ಕಾಲೇಜಿನ ಹೆಸರೇನು?
10. ಪ್ರಪಂಚದಾದ್ಯಂತ ಸುಮಾರು ಎಷ್ಟು ಭಾಷೆಗಳಿವೆ ಎಂದು ಅಂದಾಜು ಮಾಡಲಾಗಿದೆ ?

**"ಆ–ವಿಭಾಗ"**

**2) ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 2*5=10**

11. ಕಂಪು ಮತ್ತು ಹೊಳಪು ಯಾವ ವಸ್ತುಗಳ ಗುಣಗಳಾಗಿವೆ ?
12. ಸಿರಿ ಮತ್ತು ದೊರೆತನಗಳು ಬಂದಾಗ ಮನುಷ್ಯನು ಹೇಗಿರಬೇಕು ?
13. ಶಿಷ್ಯನಿಗೆ ಯಾವ ಗುಣಗಳನ್ನು ತ್ಯಜಿಸಲು ಗುರು ಹೇಳುತ್ತಾರೆ ?
14. ತಿಂದುಂಡು ಮೆರೆದವರು ಯಾರು ಯಾರು ?
15. ಗರಡಿಯ ಪ್ರಯೋಜನಗಳೇನು ?
16. ಬಂಡಿಯ ಮೈ ನಡುಗಲು ಕಾರಣವೇನು ?
17 ಹೊಸ ಕಾವ್ಯವನ್ನು ಬರೆಯಬೇಕಾದುದು ಎಲ್ಲಿ ? ಏಕೆ ?

**3) ಕೆಳಗಿನ ಮೂರು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3*3=9**

18. 'ನರರಲ್ಲೇಕೆ ಗುಂಪುಗಾರಿಕೆ'
19. 'ಕಮಲ ಪತ್ರಕ್ಕೆ ಒಳಗಿನ ಜಲದಂತೆ'
20. 'ಕಾಮಾದಿಗಳ ಜಯಿಸೆಂದು ಕೈವಿಡಿದನುಗ್ರಹಿಸುವ'
21. 'ನಿನ್ನನುಭವವೆ ನಿನಗೆ ಧರ್ಮದ ದೀಪ'
22. 'ಇರಲಿ ಬಿಡಿ ಅವಳದೇ ಮುದ್ರೆ'

**4) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ 4*4=16**

23. ಭಕ್ತಿ ಮಾರ್ಗವೇ ಮೋಕ್ಷಕ್ಕೆ ಶ್ರೇಷ್ಠ ಎಂಬುದನ್ನು ಬಸವಣ್ಣನವರ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.
24. ವಿಚಾರವಿಲ್ಲದ ಆಚರಣೆಯು ವ್ಯರ್ಥ ಎಂಬುದನ್ನು "ಏನು ಓದಲೇನು ಫಲ" ಈ ಕವಿತೆಯ ಹಿನ್ನಲೆಯಲ್ಲಿ ವಿವೇಚಿಸಿ.

25. “ಬಣ್ಣದ ಗುಬ್ಬ್ಯಾರು ಮಳಿರಾಜ” – ಹಾಡಿನಲ್ಲಿ ಬರಗಾಲದ ಭೀಕರತೆಯ ವಿವಿಧ ಮುಖಗಳು ಹೇಗೆ ಮೂಡಿ ಬಂದಿವೆ ? ವಿವರಿಸಿ.
26. ಶ್ರಾವಣ ಕವಿತೆಯಲ್ಲಿ ವ್ಯಕ್ತವಾದ ನಿಸರ್ಗ ವೈಭವವನ್ನು ಚಿತ್ರಿಸಿ
27. ತಾಯಿಯ ಆತಂಕ, ವೇದನೆ “ರೈಲ್ವೆ ನಿಲ್ದಾಣದಲ್ಲಿ” ಕವಿತೆಯಲ್ಲಿ ಹೀಗೇ ವ್ಯಕ್ತವಾಗಿದೆ ?
28. ಗಜಲ್‌ದಲ್ಲಿ ವ್ಯಕ್ತವಾದ ಸಕಾರಾತ್ಮಕ ಧೋರಣೆಯನ್ನು ಸಂಗ್ರಹಿಸಿ ಬರೆಯಿರಿ

**5) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ** **4*1=4**

29. ಕಂದನ ಕಿರಿ ಕಿರಿ ಇಂದೇನು ಹೇಳಲಿ
ಬಿಂದಿಗಿ ಹಾಲ ಸುರವಂದ ! ಚೆಂಜೀಯ
ಚಂದ್ರಮನ ತಂದು ನಿಲಿಸೆಂದ !!

30. ಸಾಮ್ರಾಜ್ಯ ಶೂರ್ಪನಕಿ ಮೋಹಿನಿಯ ರೂಪಕ್ಕೆ
ಮರುಳಾಗೆನೆಂದಿಗೂ, ಸೀತೆ ಮೇಲಾಣೆ!
ಬಡತನದ ಗೊಬ್ಬರವನನುದಿನಂ ಹೀರಿ
ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ!

**“ಇ–ವಿಭಾಗ”**

**6) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2*4=8**

31. ಪಾರ್ವರನ್ನು ನೋಡಿ ಧೂರ್ತರು ಏನೆಂದುಕೊಂಡರು ?
32. ರೋಮ್‌ನಲ್ಲಿ ನೋಡಲೇಬೇಕಾದ ಪ್ರಸಿದ್ಧ ಚರ್ಚುಗಳು ಯಾವುವು ?
33. ವೆಟಿಕನ್ ನಗರವನ್ನು ಕುರಿತು ಕಾರಂತರು ತಿಳಿಸಿದ ವಿವರಗಳೇನು?
34. ಪೂಜಾರಿಯು ನೊಂದವರಿಗೆ ಸಾಂತ್ವನವನ್ನು ಹೇಗೆ ನೀಡುತ್ತಾನೆ ?
35. ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು ?

**7) ಯಾವುದಾದರೂ ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **3*2=6**

36. ‘ಶ್ವಾನನಂ ಪೊತ್ತು ಹೀನಜಾತಿಸಮಾನನಾದೆ.’
37. ‘ಒಂದು ದಿನದ ರಚನೆಯಲ್ಲ ಯುಗಮಾನಗಳ ರಚನೆ.’
38. ‘ಅದರಲ್ಲಿ ಅತಿ ಮಾನವ ವಿಶೇಷವೇನೂ ಇಲ್ಲ.’

**8) ಯವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4*3=12**

39. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.
40. ರೋಮ್‌ನ ಆಧುನಿಕ ವಾಸ್ತು ಶೈಲಿಯು ಇಲ್ಲಿನ ರೈಲು ನಿಲ್ದಾಣದ ಮೂಲಕ ಹೇಗೆ ವ್ಯಕ್ತಗೊಂಡಿದೆ ?
41. ಮೈಮೇಲೆ ದೆವ್ವ ಬರುವುದರ ಬಗ್ಗೆ ಮನೋವೈಜ್ಞಾನಿಕ ಅಧ್ಯಯನಗಳು ಯಾವ ವಿವರಣೆಯನ್ನು ನೀಡುತ್ತವೆ ?
42. ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಲೇಖಕರು ಮುಂದಿನ ಶಿಕ್ಷಣಕ್ಕೆ ಯಾವ ರೀತಿ ತಯಾರಿ ನಡೆಸಿದರು ?
43. ಲೇಖಕರ ಕಾಲೇಜು ಜೀವನದ ಹಿನ್ನೆಲೆಯಲ್ಲಿ ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬರೆಯಿರಿ.

**“ಈ–ವಿಭಾಗ”**

**(ಭಾಷೆ, ಸಾಹಿತ್ಯ, ಸ್ವರೂಪ)**

**9) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2*3=6**

44. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು ?
45 ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ
46. ವಚನ ಸಾಹಿತ್ಯದ ವಿಶೇಷತೆ ಏನು?
47. ದಾಸ ಸಾಹಿತ್ಯಕ್ಕಿರುವ ಇತರ ಹೆಸರುಗಳಾವುವು?

**10) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1*4=4**

48. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.
49. ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷವನ್ನು ಬರೆಯಿರಿ

**"ಉ–ವಿಭಾಗ"**

**(ಭಾಷಾಭ್ಯಾಸ ಹಾಗೂ ರಚನೆ)**

**11) ಅ. ಯಾವುದಾದರೂ ಐದು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ. 5*2=10**

50. ಎರಡು ಪದಗಳಿಗೆ ಅರ್ಥ ಬರೆಯಿರಿ : ನಂಜು, ಶೂಲ, ಇಳೆ
51. ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ : ನರ, ಕುದುರೆ, ಸೂರ್ಯ
52. ಎರಡು ಪದಗಳಿಗೆ ನಾನಾರ್ಥಕಗಳನ್ನು ಬರೆಯಿರಿ : ರಾಗ, ಸಮಯ, ಅರಸು
53. ಎರಡು ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ : ಚಂದ್ರ, ಕಬ್ಬ, ಸಂತೋಷ
54. ಎರಡು ಪದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ :ಮಾರ್‍ರ್‍ಯಾರ, ಕೂಡಿಸ್ಯಾರ, ಉಣಿಸ್ಯಾರ
55. ಎರಡು ಪದಗಳನ್ನು ಬಿಡಿಸಿ ಬರೆಯಿರಿ : ಹಡೆದವ್ವ, ಧಾರೆಯರೆ, ಸೇರಲಾಗದು
56. ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ : ಮೈಯೊಡ್ಡು, ತಲೆದೂಗು, ಮಣ್ಣಾಗಿ ಹೋಗು

**ಆ–ಗ್ರಹಿಕೆ**

**ಆ. ಪಠ್ಯೇತರ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. 1*5=5**

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಭರತ ಖಂಡದ ಇತಿಹಾಸದಲ್ಲಿ ಅತ್ಯಂತ ತೇಜೋಮಯವಾದುದು. ಬ್ರಹ್ಮ ಸಾಕ್ಷತ್ಕಾರವನ್ನು ಪಡೆದಿದ್ದ ಮಹಾ ಮಹಿಮ ಶ್ರೀ ರಾಮಕೃಷ್ಣ ಪರಮಹಂಸರ ಅತ್ಯಾಪ್ತ ಶಿಷ್ಯರಾಗಿ, ಅವರ ದರ್ಶನವನ್ನು ಜಗತ್ತಿಗೆ ತೋರಿಸಿದ ಅಸಾಧಾರಣ ಚೇತನ ಸ್ವಾಮಿ ವಿವೇಕಾನಂದ. ಅಸಾದೃಶವಾದ ಜ್ಞಾನ, ವೈರಾಗ್ಯ, ಧೈರ್ಯ ಪ್ರತಿಭೆ, ವಾಗ್ಮಿತೆ, ಸಂಘಟನೆ, ಸ್ಮರಣ ಶಕ್ತಿಗಳು ಸಂಯೋಗವಾದ ವಿವೇಕಾನಂದರು 1893ನೇ ಸೆಪ್ಟೆಂಬರ್ 11 ರಂದು ಅಮೇರಿಕಾದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದ ವಿರಾಟ್ ಸಭೆಯಲ್ಲಿ ಮಾಡಿದ ಭಾಷಣ ಜಗದ್ವಿಖ್ಯಾತ.

57. ತೇಜೋಮಯವಾದ ವ್ಯಕ್ತಿತ್ವ ಯಾರದ್ದು ?
58. ಬ್ರಹ್ಮ ಸಾಕ್ಷತ್ಕಾರವನ್ನು ಪಡೆದಿದ್ದವರು ಯಾರು ?
59 ಸ್ವಾಮಿ ವಿವೇಕಾನಂದರ ಗುರು ಯಾರು ?
60. ವಿಶ್ವಧರ್ಮ ಸಮ್ಮೇಳನ ಎಲ್ಲಿ ನಡೆಯಿತು ?
61. ವಿಶ್ವಧರ್ಮ ಸಮ್ಮೇಳನ ಎಷ್ಟರಲ್ಲಿ ನಡೆಯಿತು ?

**ಪ್ರಥಮ ಪಿಯುಸಿ ಐಚ್ಛಿಕ ಕನ್ನಡ**
**ಕಡಿತಗೊಂಡ ಪಠ್ಯಕ್ರಮ 2020–21**
**ಮಾದರಿ ಪ್ರಶ್ನೆ ಪತ್ರಿಕೆ–2**
**ವಿಷಯ: ಐಚ್ಛಿಕ ಕನ್ನಡ**

**ವಿಷಯದ ಸಂಕೇತ ಸಂಖ್ಯೆ : 16** — **ಒಟ್ಟು ಪ್ರಶ್ನೆಗಳ ಸಂಖ್ಯೆ 61**
**ಅವಧಿ : 3ಗಂಟೆ 15 ನಿಮಿಷ** — **ಅಂಕಗಳು : 100**

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು**

1. ಪರೀಕ್ಷಾರ್ಥಿಯು ಸಾಧ್ಯವಾದಷ್ಟು ತಮ್ಮ ಸ್ವಂತ ಪದಗಳಲ್ಲಿ ಉತ್ತರಿಸಿ
2. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪೂರ್ಣಾಂಕಗಳನ್ನು ಸೂಚಿಸುತ್ತವೆ.
3. ಪರೀಕ್ಷಾರ್ಥಿಗಳು ಉತ್ತರಿಸುವಲ್ಲಿ ಸಾಧ್ಯವಾದಷ್ಟು ಉತ್ತರವು ಶಬ್ಧಗಳ ಪರಿಮಿತಿಯೊಳಗೆ ಇರುವಂತೆ ಗಮನಿಸುವುದು.
4. ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥ ಮಾಡಿಕೊಳ್ಳಲು 15 ನಿಮಿಷ ಕಾಲಾವಕಾಶ ನೀಡಲಾಗಿದೆ.

**"ಅ–ವಿಭಾಗ"**

**1) ಎಲ್ಲಾ ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.** **1*10=10**

1. ಗುಂಪುಗಾರಿಕೆ ಗಾಂಪತನ ಯಾರಲ್ಲಿ ಇಲ್ಲ?
2. ಸಿರಿ ಬಂದ ಕಾಲಕ್ಕೆ ಹೇಗಿರಬೇಕು?
3. ಬಿಕ್ಷೆಕ್ಕೆ ಹೋದವರು ಯಾರು?
4. ಪರ್ಜನ್ಯ ಗೀತವನ್ನು ಹಾಡುತ್ತ ಬಂದವರು ಯಾರು?
5. ಸಾಮ್ರಾಜ್ಯ ಕಾಳಿಗೆ ಬಲಿಯಾಗುವ ಕುರಿ ಯಾರು?
6. ತಾರೆಗಳು ಎಲ್ಲಿ ಜಿಗಿದು ಹೋಗಿವೆ?
7. ಪಾರ್ವನು ಯಾವ ಕಾರಣಕ್ಕಾಗಿ ಆಡನ್ನು ಖರೀದಿಸಿದ್ದನು?
8. ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ?
9. ಲೇಖಕರನ್ನು ಹಾಸ್ಟೆಲ್‌ಗೆ ಕರೆದೊಯ್ದವರು ಯಾರು?
10. ಹತ್ತನೇ ಶತಮಾನವನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಏನೆಂದು ಕರೆಯುತ್ತಾರೆ?

**"ಆ–ವಿಭಾಗ"**

**2) ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2*5=10**

11. ಮಾದಾರ ಚನ್ನಯ್ಯ ಪ್ರಶ್ನಿಸಿರುವ ಮುಕ್ತಿಯ ಮಾರ್ಗಗಳಾವುವು?
12. ಭಾಗ್ಯವಂತನೆಂದು ಯಾರನ್ನು ಕರೆಯಲಾಗುವುದಿಲ್ಲ?
13. ಗರತಿಯು ಬಣ್ಣಿಸಿರುವ ಪ್ರಕೃತಿಯ ಚಲುವು ಎಂತಹುದು?
14. ದೇವನದೇಟಿನ ಕಾಯಿಗಳಲ್ಲಿರುವ ವ್ಯತ್ಯಾಸ ಯಾವುದು?
15. ಗರಡಿಯ ಪ್ರಯೋಜನಗಳೇನು?
16. 'ಬಿಸಿ ನೀರಿದೆಯೇ' ಎಂಬ ತಾಯಿಯ ಪ್ರಶ್ನೆಗೆ ಮಗಳ ಉತ್ತರವೇನು?
17 ಹೊಸ ಚರಿತ್ರೆ ರಚಿಸಲು ಯಾವ ಅಂಶಗಳು ಬೇಕು?

**3) ಕೆಳಗಿನ ಮೂರು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3*3=9**

18. 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ'
19. 'ಮನುಮಥನ ಬಾಣಕ್ಕಳುಕದಿರು'
20. 'ಆರು ನಾನೆಂದು ವಿಚಾರಿಸು'
21. 'ನಮ್ಮವರೆ ಹದ ಹಾಕಿ ತಿವಿದರದು ಹೂವೆ'
22. 'ಬುದ್ಧಿ ಭಾವಗಳೆಲ್ಲವು ಅವಳವೆ ಆಗಿರಲಿ'

**4) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4*4=16**

23. ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ.. ವಚನದ ಹಿನ್ನೆಲೆಯಲ್ಲಿ ಪ್ರಸ್ತುತ ಕೌಟುಂಬಿಕ, ಸಾಮಾಜಿಕ, ರಾಜಕೀಯ ಸ್ಥಿತಿ-ಗತಿಗಳನ್ನು ವಿವರಿಸಿ.
24. ಕನಕದಾಸರು ಅನಿತ್ಯವಾದ ಬದುಕನ್ನು ಹೇಗೆ ಸಾರ್ಥಕಪಡಿಸಿಕೊಳ್ಳಬೇಕೆನ್ನುತ್ತಾರೆ? ವಿವರಿಸಿ.
25. ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
26. ಶ್ರಾವಣದ ಆಗಮನದಿಂದ ಇಳೆಯಲ್ಲಾದ ಬದಲಾವಣೆಯನ್ನು ಚಿತ್ರಿಸಿ.
27. ತಾಯಿ ಮಗಳ ಅಂತ:ಕರಣ "ರೈಲ್ವೆ ನಿಲ್ದಾಣದಲ್ಲಿ" ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ?
28. ವಿಶ್ವದ ನವ ನಿರ್ಮಾಣಕ್ಕಾಗಿ ನಾವು ಮಾಡಬೇಕಾರಿರುವುದೇನು?

**5) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ** **4*1=4**

29. ತಾಯವ್ವನ ಬ್ಯೆಬ್ಯಾಡ ತಿಳಿಗೇಡಿ ನನ ತಮ್ಮ
    ಭಾಳ ದಿನದಾಕಿ ಹಡೆದವ್ವಗ । ಬೈದರ
    ಭಾಳ ಮರುಗ್ಯಾಳ ಮನದಾಗ
30. ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ।
    ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
    ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
    ಎಲ್ಲರೊಳಗೊಂದಾಗು- ಮಂಕುತಿಮ್ಮ

**"ಇ-ವಿಭಾಗ"**

**6) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2*4=8**

31. ಬ್ರಹ್ಮಣ್ಯದ ಚಿಹ್ನೆಗಳಾವುವು?
32. ರೋಮ್ ನಗರವನ್ನು ಕುರಿತ ಎರಡು ಹಳೆಯ ಗಾದೆಗಳು ಯಾವುವು?
33. ವೆಟಿಕನ್ ನಗರವನ್ನು ಕುರಿತು ಕಾರಂತರು ತಿಳಿಸಿದ ವಿವರಗಳೇನು?
34. ಜನರು ಪುರುಷ ಪ್ರಯತ್ನಗಳನ್ನು ಯಾವಾಗ ಕೈಬಿಡುತ್ತಾರೆ.?
35. ಹುಬ್ಬಳ್ಳಿಯಲ್ಲಿಯ ಹಾಸ್ಟೇಲ್ಲಿನ ವಾತಾವರಣ ಯಾವ ರೀತಿಯಲ್ಲಿತ್ತು?

**7) ಯಾವುದಾದರೂ ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **3*2=6**

36. 'ನಾಯಲ್ಲಿದು ಭೂಭುವನ ಪ್ರಸಿದ್ಧಮಜಂ'
37. 'ಅಲ್ಲಲ್ಲಿ ಶಿಲೆಯದೆ ಮಂಚಗಳಿವೆ'
38. 'ತನಗೇನು ಬೇಕೆಂದು ಕೇಳಬಹುದು, ಪಡೆಯಲೂಬಹುದು'

**8) ಯವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4*3=12**

39. ವಂಚಕರ ಸಂಚಿಗೆ ಹಂತ-ಹಂತವಾಗಿ ಮರುಳಾಗುವ ಬ್ರಾಹ್ಮಣನ ಮನಸ್ಥಿತಿಯನ್ನು ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.
40. ಮೈಕೆಲ್ ಏಂಜಲೋವಿನ ಬಾಳು ಸಾರ್ಥಕಗೊಳಿಸಿದ ಶಿಲ್ಪ ಕಲಾಕೃತಿಯನ್ನು ಕಾರಂತರು ವರ್ಣಿಸಿದ ಬಗೆ ತಿಳಿಸಿ.
41. ಮೈಮೇಲೆ ದೇವರು ಬರುವುದು ನಮ್ಮ ಜನಗಳ ಸ್ವಾಗತಾರ್ಹ ವಿಶೇಷ ಹೇಗೆ ವಿವರಿಸಿ.
42. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರದ ಪರಿಸರಕ್ಕೆ ಕಾಲಿಟ್ಟಾಗ ಎದುರಿಸುವ ಸಮಸ್ಯೆಗಳು ಪ್ರಸ್ತುತ ಪಾಠದಲ್ಲಿ ಹೇಗಿ ಚಿತ್ರಿತವಾಗಿವೆ.
43. ಲೇಖಕರ ಕಾಲೇಜು ಜೀವನದ ಹಿನ್ನೆಲೆಯಲ್ಲಿ ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಕರಿತು ಬರೆಯಿರಿ.

**"ಈ-ವಿಭಾಗ"**

**(ಭಾಷೆ, ಸಾಹಿತ್ಯ, ಸ್ವರೂಪ)**

**9) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2*3=6**

44. ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ
45. ಹತ್ತನೇ ಶತಮಾನವನ್ನು ಪಂಪಯುಗವೆಂದು ಕರೆಯಲು ಕಾರಣವೇನು?

46. ವಚನ ಸಾಹಿತ್ಯದ ವಿಶೇಷತೆ ಏನು?
47. ದಾಸ ಸಾಹಿತ್ಯಕ್ಕಿರುವ ಇತರ ಹೆಸರುಗಳಾವುವು?

**10) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ.** **1*4=4**
48. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.
49. ಸಾಹಿತ್ಯದ ಪ್ರಯೋಜನವನ್ನು ವಿವರಿಸಿ.

**"ಉ–ವಿಭಾಗ"**
**(ಭಾಷಾಭ್ಯಾಸ ಹಾಗೂ ರಚನೆ)**

**11) ಅ. ಯಾವುದಾದರೂ ಐದು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ.** **5*2=10**
50. ಎರಡು ಪದಗಳಿಗೆ ಅರ್ಥ ಬರೆಯಿರಿ : ಕಾಯ, ಅಧಮ, ಕಂಪು
51. ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ : ಸುವರ್ಣ, ಪುಷ್ಪ, ಧರೆ
52. ಎರಡು ಪದಗಳಿಗೆ ನಾನಾರ್ಥಕಗಳನ್ನು ಬರೆಯಿರಿ : ಅರಸು, ಸಮಯ, ಕವಿ.
53. ಎರಡು ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ : ಪ್ರಾಣ, ರಕ್ಕಸ, ಮೂರ್ತಿ.
54. ಎರಡು ಪದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ :ಕೊಡಿಸ್ಯಾರು, ಭಿಕ್ಷಾಕ, ಹಿಟ್ಯಾನ್ಯಾಗ.
55. ಎರಡು ಪದಗಳನ್ನು ಬಿಡಿಸಿ ಬರೆಯಿರಿ : ಮೊಳಕೆಯೊಳಗೆ, ಹುಲ್ಲಾಗು, ಪಾಲೊಳು.
56. ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ : ಬಣ್ಣವೇರು, ಮೈಯೊಡ್ಡು, ಚಿಗುರೊಡೆ

**ಆ–ಗ್ರಹಿಕೆ**

**ಆ. ಪಠ್ಯೇತರ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** **1*5=5**

"ಬುಲಾಯಿ ಹಾಡು" ಒಂದು ಜನಪದ ಕಾವ್ಯ ಪ್ರಕಾರ. ಅದರಲ್ಲೂ ವಿಶೇಷವಾಗಿ ಬೀದರ ಜಿಲ್ಲೆಯಲ್ಲಿ ಬುಲಾಯಿ ಹಾಡಿನ ಪರಂಪರೆ ತುಂಬಾ ಜನಪ್ರಿಯವಾಗಿದೆ. ನಾಗ ಪಂಚಮಿ ಹಬ್ಬದ ಸಂದರ್ಭದಲ್ಲಿ ಮನರಂಜನೆಗಾಗಿ ಮೇಳಗೀತೆಯ ರೂಪದಲ್ಲಿ ಇದನ್ನು ಹಾಡಲಾಗುತ್ತದೆ. ದೃಶ್ಯ–ಶ್ರವ್ಯ ಗುಣಗಳೆರಡೂ ಇದರಲ್ಲಿ ಕಂಡು ಬರುತ್ತವೆ. ಹಾಡಿನಲ್ಲಿ ಎರಡು ಸಾಲುಗಳ ಬಂಧವಿದೆ. ಎರಡು ಸಾಲಿಗೊಮ್ಮೆಯಂತೆ "ಕೋಲ" ಎಂಬ ಪಲ್ಲವಿ ಬರುತ್ತದೆ. ಹಾಡುವಾಗ ಕೋಲಿನ ಬಳಕೆ ಮೊದಲು ಇದ್ದಿರಬೇಕು. ಆದರೆ ಈಚೆಗೆ ಕೋಲುಗಳನ್ನು ಬಳಸುವುದಿಲ್ಲ. ಕನ್ನಡದ ಲಾವಣಿ, ಹಂತಿ ಪದ, ಸೋಬಾನ ಪದಗಳಂತೆ ಬುಲಾಯಿ ಹಾಡಿನ ಪರಂಪರೆಯೂ ಸಾಕಷ್ಟು ಜನಪ್ರಿಯವಾಗಿದೆ.

"ಬುಲಾಯಿ" ಎಂಬುದು ಬಹುಶ: ಮನರಂಜನೆ ಎಂಬ ಅರ್ಥ ಕೊಡುವ "ಬೆಹಲಾವ್" ಎಂಬ ಉರ್ದು ಶಬ್ದದಿಂದ ರೂಪುಗೊಂಡಿರಬಹುದು. ಪೌರಾಣಿಕ, ಐತಿಹಾಸಿಕ ಹಾಗೂ ದೇಶ ಪ್ರೇಮದ ಕುರಿತಾದ ಹಾಡುಗಳು ಬುಲಾಯಿ ಪರಂಪರೆಯಲ್ಲಿವೆ.

ಪ್ರಶ್ನೆಗಳು :
57. ಯಾವ ಜಿಲ್ಲೆಯಲ್ಲಿ ಬುಲಾಯಿ ಹಾಡು ತುಂಬಾ ಜನಪ್ರಿಯವಾಗಿವೆ.!
58. ಯಾವ ಹಬ್ಬದ ಸಂದರ್ಭದಲ್ಲಿ ಬುಲಾಯಿ ಹಾಡನ್ನು ಹಾಡಲಾಗುತ್ತದೆ?
59 "ಕೋಲ" ಎಂಬ ಪಲ್ಲವಿ ಯಾವಾಗ ಬರುತ್ತದೆ?
60. ಕನ್ನಡದ ಲಾವಣಿಯಂತೆ ಇರುವುದು ಯಾವುದು?
61. ಬುಲಾಯಿ ಎಂಬುದು ಯಾವ ಭಾಷೆಯಿಂದ ಬಂದಿದೆ?